ಬಿ.ಎಸ್. ಯಡಿಯೂರಪ್ಪ
ಮುಖ್ಯ ಮಂತ್ರಿ

ಕರ್ನಾಟಕ ಸರ್ಕಾರ

ವಿಧಾನ ಸೌಧ
ಬೆಂಗಳೂರು - 560 001

ದಿನಾಂಕ 16/12/2019

ಸಂಖ್ಯೆ: ಮುಮಂ/ಮಾಕಾ/132/2019

# ಸಂದೇಶ

ರಾಜ್ಯ ಸರ್ಕಾರವು 2020 ನೂತನ ವರ್ಷದಿಂದ ಇ-ಗೆಜೆಟ್‌ನ್ನು ಪ್ರಾರಂಭಿಸುತ್ತಿರುವುದು ಅತ್ಯಂತ ಔಚಿತ್ಯಪೂರ್ಣ.

ಸರ್ಕಾರದ ಆಡಳಿತ, ಅರ್ಥ ವ್ಯವಸ್ಥೆ, ಸಾಂಸ್ಕೃತಿಕ, ಸಾಮಾಜಿಕ ಕ್ಷೇತ್ರಗಳಲ್ಲಿನ ಬೆಳವಣಿಗೆಗಳು ಹಾಗೂ ರಾಜ್ಯದ ವಿವಿಧ ಇಲಾಖೆಗಳ ಸಾಧನೆಗಳ ಸಮಗ್ರ ಮಾಹಿತಿಯನ್ನು ಕರ್ನಾಟಕ ರಾಜ್ಯ ಪತ್ರ ಒದಗಿಸುತ್ತದೆ. ರಾಜ್ಯದ ವಿವಿಧ ಜಿಲ್ಲೆಗಳ ಅಭಿವೃದ್ಧಿಯ ಬಗ್ಗೆ ನಿಖರ ಹಾಗೂ ವಿಶ್ವಾಸಾರ್ಹ ಮಾಹಿತಿಯನ್ನು ಜನರಿಗೆ ನೀಡುವಲ್ಲಿ ಕರ್ನಾಟಕ ರಾಜ್ಯ ಪತ್ರ ಪ್ರಮುಖ ಪಾತ್ರ ನಿರ್ವಹಿಸುತ್ತದೆ.

ಭಾರತ ಸರ್ಕಾರದ ಇ-ಗೆಜೆಟ್ ಮಾದರಿಯಲ್ಲಿಯೇ ರಾಜ್ಯಪತ್ರಗಳನ್ನು ಇ-ಗೆಜೆಟ್ ವ್ಯವಸ್ಥೆಯ ಮೂಲಕ ಪ್ರಕಟಿಸುವ ಉಪಕ್ರಮ ಅರ್ಥಪೂರ್ಣವಾಗಿದೆ. ಇ-ಗೆಜೆಟ್‌ನಿಂದ ರಾಜ್ಯದ ಕುರಿತ ಮಾಹಿತಿಗಳು ಹೆಚ್ಚು ಜನರನ್ನು ಸುಲಭವಾಗಿ ತಲುಪುವಂತಾಗಲಿ ಎಂದು ಶುಭ ಹಾರೈಸುತ್ತೇನೆ.

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ನಿರ್ದೇಶಕರು
ಮುದ್ರಣ, ಲೇಖನ ಸಾಮಗ್ರಿ
ಮತ್ತು ಪ್ರಕಟಣೆಗಳ ಇಲಾಖೆ,
ಬೆಂಗಳೂರು.